# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ. 1203/2021

| | | | | |
|---|---|---|---|---|
| 01 | ಹೆಸರು | ಡಾ.ಮಾಲತೇಶ್ ಎಸ್ ಹೆಚ್ | ಸಿ ಡಬ್ಲೂ | **6** |
| 02 | ತಂದೆಯ ಹೆಸರು | ಶಿವಪ್ಪ | ಪಿಡಬ್ಲೂ | 3 |
| 03 | ವಯಸ್ಸು | 42 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವೈದ್ಯಾಧಿಕಾರಿಗಳು | 17.12.2025 | |
| 05 | ಊರು | ಬನ್ನೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಏಪ್ರಿಲ್ 2021 ರಿಂದ ಇಲ್ಲಿಯವರೆಗೂ ಬನ್ನೂರಿನ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ29.04.2021 ರಂದು ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾ ಸಾ 1ರವರು ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆಗೆಂದು ನಮ್ಮ ಆಸ್ಪತ್ರೆಗೆ ಮಧ್ಯಾಹ್ನ 2.30 ಗಂಟೆಗೆ ಬಂದಿರುತ್ತಾರೆ. ನಾನು ಅವರನ್ನು ವಿಚಾರಣೆ ಮಾಡಿದಾಗ ಅವರು ತಮಗೆ ಬೆಳಗ್ಗೆ 7.30 ಗಂಟೆಗೆ ಆರೋಪಿಗಳಾದ ಲಿಂಗರಾಜು ಮತ್ತು ಪ್ರಭಾ ಎನ್ನುವವರು ತಮಗೆ ಹಲ್ಲೆ ಮಾಡಿ ನೋವುಂಟು ಮಾಡಿರುವುದಾಗಿ ತಿಳಿಸಿರುತ್ತಾರೆ. ನಾನು ಅವರನ್ನು ತಪಾಸಣೆ ಮಾಡಿದಾಗ ಅವರ ತಲೆಯ ಮುಂಭಾಗದಲ್ಲಿ, ಬಲ ಮುಂಗೈ ಮತ್ತು ಎಡಭುಜದಲ್ಲಿ ನೋವಿರುವುದು ಕಂಡುಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ್ದು ಇರುತ್ತದೆ. ಯಾವುದೇ ವ್ಯಕ್ತಿಗೆ ತಲೆಯ ಕೂದಲನ್ನು ಹಿಡಿದು ಎಳೆದಾಡಿ ನೆಲಕ್ಕೆ ಬೀಳಿಸಿ ಕಾಲಿನಿಂದ ತುಳಿದು ಮತ್ತು ಕೈಗಳಿಂದ ಹೊಡೆದಾಗ ಸದರಿ ಸ್ವರೂಪದ ನೋವುಂಟಾಗುತ್ತದೆ. ನಾನು ತನಿಖಾಧಿಕಾರಿಗಳ ಕೋರಿಕೆಯಂತೆ ಚಾ ಸಾ 1ರವರ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನ. ಸಾಕ್ಷಿಯು ಗಾಯದಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಯು ವಕೀಲರಿಂದಃ**

ಚಾ ಸಾ 1 ರವರು ಒಬ್ಬರೇ ಆಸ್ಪತ್ರೆಗೆ ಬಂದಿರುತ್ತಾರೆ. ಚಾ ಸಾ 1 ರವರು ಹೇಳಿದ ಕಾರಣ ನನಗೆ ನಿ ಪಿ 3 ರಲ್ಲಿ ನಮೂದಿಸಿರುವ ನೋವುಗಳು ನನ್ನ ಗಮನಕ್ಕೆ ಬಂದಿರುತ್ತವೆ ಎಂದರೆ ಸರಿ. ಆರೋಪಿಗಳ ವಿರುದ್ಧ ಸುಳ್ಳು ದೂರು ದಾಖಲಿಸಿಸಲು ಚಾ ಸಾ 1 ರವರು ನನ್ನ ಬಳಿ ಸುಳ್ಳು ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾ ಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.